ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 10-13
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಲಂಕೇಶರ ನಾಟಕಗಳು

**ಕುಸುಮ ಬಿ.ಎಂ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

***Abstract:***
*ಅಭಿಜಾತ ಕಲೆಯಾದ ನಾಟಕವನ್ನು ಮಹಾಕಾವ್ಯಕ್ಕೆ ಸಮಾನವಾದ ನೆಲೆಯಲ್ಲಿ ಕಾಣಲಾಗುತ್ತದೆ. 'ಕಾವ್ಯೇಶು ನಾಟಕಂ ರಮ್ಯಂ' ಮಾತು ಇದನ್ನು ಪುರಷ್ಕರಿಸುತ್ತದೆ. ಹೀಗಿದ್ದರೂ ಕನ್ನಡದಲ್ಲಿ ನಾಟಕ ಪ್ರಕಾರ ಬಹಳ ತಡವಾಗಿ ಕಾಣಿಸಿಕೊಂಡಿತು. ಹೊಸಗನ್ನಡ ಸಾಹಿತ್ಯದಲ್ಲಿ ನಾಟಕ ವಿಶೇಷವಾಗಿ ಬೆಳೆದು ಬಂದಿದೆ. "ನಾಟಕವೆಂದರೆ ಮನಸ್ಸಿಗೆ ಹಿಡಿಯುವಂತೆ ಮಂಡಿಸುವ ಕಲೆ" ಎನ್ನುವ ಲಂಕೇಶ್‌ರವರು ನಾಟಕ ರಚನೆಗೆ ತೊಡಗಲು ತಮಗೆ ಸಿಕ್ಕಿದ ಮೊದಲ ಪ್ರಚೋದನೆ ಒಂದು ಕ್ಷುಲ್ಲಕ ನಗೆ ನಾಟಕವೆಂದು ಹೇಳಿಕೊಂಡಿದ್ದಾರೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಮಂದಿರದಲ್ಲಿ ಪ್ರದರ್ಶನಗೊಂಡ ಈ ನಗೆ ನಾಟಕವು ಅವರಲ್ಲಿ ಹುಟ್ಟಿಸಿದ ಅತೃಪ್ತಿಯೇ ಕಾರಣವಾಗಿ ಅವರ ಮೊದಲ ನಾಟಕ ರಚನೆಯಾಯಿತು. ಪ್ರಸ್ತುತ ಲೇಖನದಲ್ಲಿ ಲಂಕೇಶರ ನಾಟಕಗಳನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ನಾಟಕ ಸಾಹಿತ್ಯ, ಪಿ.ಲಂಕೇಶ್, ಟಿ.ಪ್ರಸನ್ನನ ಗೃಹಸ್ಥಾಶ್ರಮ, ಸಂಕ್ರಾಂತಿ, ಗುಣಮುಖ.*

## ಪೀಠಿಕೆ

'ನಾಟಕವನ್ನು ಕೇವಲ ಅಭಿಮಾನ ಮತ್ತು ಭೂತಕಾಲದ ಅವಶೇಷವಾಗಿ ಕಟ್ಟಿ ಬೆಳೆಸಬೇಕಾಗಿಲ್ಲ, ನಾಟಕದಲ್ಲಿ ಸಿಕ್ಕತಕ್ಕದ್ದು ಬೇರೆ ಎಲ್ಲೂ ಸಿಕ್ಕಲಾರದು ಎಂಬುದನ್ನು ಸಿದ್ಧಪಡಿಸಬೇಕು' ಎಂಬುದು ಲಂಕೇಶರ ನಿಲುವು. 1972 ರಲ್ಲಿ ಲಂಕೇಶರು ಪ್ರಕಟಿಸಿರುವ 'ನಾಟಕದಲ್ಲಿ ನವ್ಯತೆ' ಎಂಬ ಚಿಕ್ಕ ಪುಸ್ತಕದಲ್ಲಿ ಆಧುನಿಕ ಕನ್ನಡ ನಾಟಕ ಪರಂಪರೆಯ ಕೊರತೆಯನ್ನು ಪಟ್ಟಿ ಮಾಡಿದ್ದಾರೆ.

ನಾಟಕ ಸಾಹಿತ್ಯವು ಬಡವಾಗಿರುವುದಕ್ಕೆ ಲಂಕೇಶರು ಕೆಲವು ಕಾರಣಗಳನ್ನು ಹುಡುಕಿ ಕೊಡುತ್ತಾರೆ. ಮೊದಲನೆಯದಾಗಿ ನಾಟಕವೆಂಬುದು ಕಾವ್ಯದಷ್ಟೇ ಗಂಭೀರ ವಿವೇಚನೆಗೆ ಯೋಗ್ಯವಾದ ಮಾಧ್ಯಮವೆಂಬುದು ನಮಗೆ ಇತ್ತೀಚಿಗೆ ಗೊತ್ತಾಗತೊಡಗಿದೆ. ಎರಡನೆಯದು ಬಹುಕಾಲದಿಂದ ಕಾವ್ಯಕ್ಕೆ ನಮ್ಮ ಸಂಸ್ಕೃತಿಯಲ್ಲಿ ಕೇಂದ್ರ ಸ್ಥಾನ ಕೊಟ್ಟುಕೊಂಡು ಬಂದ ನಮ್ಮ ಜನರ ಧೋರಣೆಯಿಂದಾಗಿ ಅತ್ಯುತ್ತಮ ಕ್ರಿಯಾ ಚೇತನಗಳು ನಾಟಕ ರಚನೆಯಲ್ಲಿ ತೊಡಗಲು ಸಾಧ್ಯವಾಗಲಿಲ್ಲ. ಮೂರನೆಯದಾಗಿ ನಾಟಕ ಮಾಧ್ಯಮವನ್ನು ಸಾಕಷ್ಟು ಗಂಭೀರವಾಗಿ ತೆಗೆದುಕೊಂಡ ಕಳೆದ ಜನಾಂಗದ ನಾಟಕಕಾರರು ವೃತ್ತಿರಂಗಭೂಮಿಯ ಸಂಪ್ರದಾಯದಗಳನ್ನು ಮುರಿದಿದ್ದಕ್ಕೆ ಸರಿಸಮಾನವಾದ ಹೊಸ ರಚನೆಗಳನ್ನು ನಮಗೆ ಕೊಡಲಿಲ್ಲ, ಮತ್ತು ನಾಲ್ಕನೆಯದಾಗಿ ನಮ್ಮಲ್ಲಿ ಇತರ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ಕೊಟ್ಟವರು ಕೂಡ ಸಮಕಾಲೀನ ರಂಗಭೂಮಿಯ ಪರಿವೆಯಿಲ್ಲದೆ

***Please cite this article as:*** ಕುಸುಮ, ಬಿ.ಎಂ. (2025). ಲಂಕೇಶರ ನಾಟಕಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(5), 10–13

ಅಥವಾ ಸಮಕಾಲೀನ ಪ್ರಜ್ಞೆಗೆ ಬೇಕಾಗಬಹುದಾದಂಥ ರಂಗಭೂಮಿಯ ಕಲ್ಪನೆ ಇಲ್ಲದೆ ಬರೆಯುವುದರಿಂದ ನಾಟಕ ಬಡವಾಗಿರುವುದು ಕಂಡುಬರುತ್ತದೆ ಎನ್ನುತ್ತಾರೆ.

ಹಾಗಾಗಿ ಶ್ರೇಷ್ಠ ನಾಟಕವು ಏಕಕಾಲಕ್ಕೆ ಸಾಹಿತ್ಯವಾಗಿ ಮತ್ತು ರಂಗಕೃತಿಯಾಗಿ ಮಾನ್ಯತೆ ಪಡೆಯಬೇಕಾಗುತ್ತದೆ.

ಲಂಕೇಶ್ ಅವರು ನಾಟಕ ಲೋಕಕ್ಕೆ ಪ್ರವೇಶಿಸಿದ್ದು, ಏಕಾಂಕ ರಚನೆಯ ಮೂಲಕ. ಅವರು ರಚಿಸಿದ ಮೊದಲ ಏಕಾಂಕ ಟಿ ಪ್ರಸನ್ನನ ಗೃಹಸ್ಥಾಶ್ರಮ 1964ರಲ್ಲಿ. ಲಂಕೇಶರು ಬಹುತೇಕ ಸಾಮಾಜಿಕ ನಾಟಕಗಳನ್ನು ರಚಿಸಿದ್ದರೂ, ಅವರ ನಾಟಕಗಳಲ್ಲಿ ಸಮಕಾಲೀನ ಅನುಸಂಧಾನದ ನೆಲೆಗಳನ್ನು ಗುರುತಿಸಬಹುದು. ಅವುಗಳೆಂದರೆ,

- ಐತಿಹಾಸಿಕ ಅನುಸಂಧಾನ – ಸಂಕ್ರಾತಿ, ಗುಣಮುಖ
- ಪೌರಾಣಿಕ ಅನುಸಂಧಾನ – ಈಡಿಪಸ್, ಅಂತಿಗೊನೆ
- ಸಾಮಾಜಿಕ ಅನುಸಂಧಾನ – ಟಿ.ಪ್ರಸನ್ನನ ಗೃಹಸ್ಥಾಶ್ರಮ, ನನ್ನ ತಂಗಿಗೊಂದು ಗಂಡು ಕೊಡಿ, ತೆರೆಗಳು, ಕ್ರಾಂತಿ ಬಂತು ಕ್ರಾಂತಿ, ಗಿಳಿಯು ಪಂಜರದೊಳಿಲ್ಲ, ಸಿದ್ಧತೆ, ಬಿರುಕು.

ಹೀಗೆ ಶೋಧನೆಗೊಳ್ಳುವ ಅವರ ನಾಟಕದ ವಸ್ತುವು, ಸಾಂಸ್ಕೃತಿಕ ಅನುಸಂಧಾನದಲ್ಲಿ ಪರ್ಯಾವಸಾನವಾಗುತ್ತವೆ. ಅವರ ಬಹುತೇಕ ನಾಟಕಗಳು ಮಹಿಳೆಯರ ನೆಲೆಯಿಂದ ವ್ಯವಸ್ಥೆಯನ್ನು ಪರಿಶೀಲಿಸುತ್ತವೆ ಮತ್ತು ಸಮಾಜದ ಭಿನ್ನ ಆಯಾಮಗಳಿಗೆ ದನಿ ಕೊಡುವ ಕೆಲಸ ಮಾಡುತ್ತವೆ.

ಹನ್ನೆರಡನೆಯ ಶತಮಾನ ಕನ್ನಡ ಚರಿತ್ರೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಾಡುತ್ತಿರುವ ಕಾಲವಾಗಿದೆ. ಈ ಕಾಲದಲ್ಲಿ ಜರುಗಿದ ಅನೇಕ ಕ್ರಾಂತಿಕಾರಕ ಬದಲಾವಣೆಗಳಲ್ಲಿ 'ಅಂತರ್ಜಾತಿಯ ವಿವಾಹ' ಬಹುಮುಖ್ಯ ಘಟನೆಯಾಗಿದೆ. ಇದಕ್ಕೆ ಸಾಹಿತ್ಯ ಸಂಸ್ಕೃತಿಯು ಭಿನ್ನ ನೆಲೆಗಳಲ್ಲಿ ಎದುರಾಗುತ್ತಲೇ ಬಂದಿದೆ. ಹನ್ನೆರಡನೆಯ ಶತಮಾನದ ಅಂತರ್ಜಾತಿಯ ವಿವಾಹವನ್ನು ವಸ್ತುವಾಗುಳ್ಳ (ಗಿರೀಶ್ ಕಾರ್ನಾಡರ ತಲೆದಂಡ, ಎಚ್. ಎಸ್. ಶಿವಪ್ರಸಾದ್‌ರ ಮಹಾಚೈತ್ರ, ಲಂಕೇಶ್‌ರ ಸಂಕ್ರಾಂತಿ) ಮೂರು ನಾಟಕಗಳನ್ನು ಗಮನಿಸಿದಾಗ, ಅಂತರ್ಜಾತಿಯ ವಿವಾಹದಲ್ಲಿ ಪಾಲ್ಗೊಂಡ ಆ ಹೆಣ್ಣಿನ ಧ್ವನಿ ಮೌನವಾಗಿದೆ. ಅಲ್ಲಿಯ ಸಮುದಾಯ ಮತ್ತು ರಾಜಕಾರಣ ಈ ಸಂಗತಿಯ ಬಗೆಗೆ ಮಾತನಾಡುತ್ತದೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಆದರೆ 'ಸಂಕ್ರಾಂತಿ' ನಾಟಕದಲ್ಲಿ ಆ ಹೆಣ್ಣಿನ ಮೌನಕ್ಕೆ ಧ್ವನಿ ಕೊಡಲಾಗಿದೆ ಮತ್ತು ಪ್ರೇಮ ವಿವಾಹದ ಹೊಸ ಆಯಾಮವನ್ನು ಒದಗಿಸಲಾಗಿದೆ. ಆ ಮೂಲಕ ನಾಟಕ ಸಮಕಾಲೀನಗೊಳ್ಳುವ ಪರಿ ವಿಶೇಷವಾಗಿದೆ. ಮಾತು, ದನಿ ಇಲ್ಲದ ಉಳಿದ ನಾಟಕಗಳಲ್ಲಿನ ಅಂತರ್ಜಾತಿಯ ವಿವಾಹದ ಹೆಣ್ಣಿನ ಎದುರು "ಸಂಕ್ರಾಂತಿ" ನಾಟಕದ ಮಾತು, ಧ್ವನಿ ಎರಡನ್ನು ಹೊಂದಿರುವ ಉಷಾ ಪಾತ್ರ ವಿಶಿಷ್ಟವಾದುದು.

ಲಂಕೇಶರ ನಾಟಕ 'ಸಂಕ್ರಾಂತಿ'ಯು ವಿವಾಹದ ಭಾಗವಾದ ಅಥವಾ ಪ್ರೇಮ ಪ್ರಕರಣದ ಭಾಗವಾದ ಹೆಣ್ಣಿನ ದನಿಯ ಪ್ರಾಮುಖ್ಯತೆಯನ್ನು ಮನಗಂಡಿದೆ ಮತ್ತು ಆ ಧ್ವನಿಗೆ ಅವಕಾಶವನ್ನು ನೀಡುವ ಮೂಲಕ ಅಂದಿನ ಸಮಾಜವನ್ನು ಪುನರ್ ಪರಿಶೀಲಿಸುವ ನೆಲೆಗೆ ಸಾಗುತ್ತದೆ. ಮೌನಕ್ರಾಂತಿಯ ಎದುರು ವಿಚಾರಕ್ರಾಂತಿಯಂತೆ 'ಸಂಕ್ರಾಂತಿ' ನಾಟಕ ನಮ್ಮನ್ನು ಎದುರಾಗುತ್ತದೆ. ಅಂಚಿನ ಭಾಗವಾಗಿ ಉಷಾ ಸಮಾಜದ ಪ್ರತಿಯೊಂದನ್ನು ಚಲನೆಯನ್ನು ಪರಾಮರ್ಶಿಸಿ ಟೀಕೆ ಟಿಪ್ಪಣಿಗಳನ್ನು ನೀಡುವ ಮೂಲಕ ಅಂದಿನ ಚಳುವಳಿಯ ಅಂತಃಸತ್ವವನ್ನು ಪ್ರಶ್ನಿಸುತ್ತಾಳೆ. "His story is also Her story" ಎಂಬಂತೆ.

ಅವರ ಮೊದಲ ಏಕಾಂಕ ಟಿ ಪ್ರಸನ್ನನ ಗೃಹಸ್ಥಾಶ್ರಮ ನಾಟಕದಲ್ಲಿಯೇ ಮಹಿಳೆಯ ದಿಟ್ಟ ನಿರ್ಧಾರಗಳು ಪ್ರಕಟವಾಗುತ್ತವೆ. ಲಕ್ಷ್ಮಿ ದಿಟ್ಟವಾಗಿ ಗೃಹ ತ್ಯಜಿಸಿ ಒಂಟಿಯಾಗಿಯೇ ಮನೆ ಬಿಟ್ಟು ಹೊರ ನಡೆಯುವುದು ಗಮನಾರ್ಹ ಬೆಳವಣಿಗೆಯಾಗಿದೆ. ನಾಟಕದ ಮುಕ್ತಾಯದ ಹೊತ್ತಿಗೆ ಪುರುಷ ಪಾತ್ರಗಳಿಗೆ ಮುಖಭಂಗವಾಗುವುದನ್ನು ಕಾಣಬಹುದು. ಪುರುಷ ಕೇಂದ್ರದ ಜಗತ್ತಿನಲ್ಲಿ ಸ್ತ್ರೀ ದಿಟ್ಟ ನಿರ್ಧಾರಗಳ ಮೂಲಕ ತನ್ನ ವ್ಯಕ್ತಿತ್ವಕ್ಕೆ ಅರ್ಥ ತಂದುಕೊಳ್ಳುವ ಸಾಧ್ಯತೆಯನ್ನು ಲಕ್ಷ್ಮಿಯ ಪಾತ್ರದ ಮೂಲಕ ತೋರಿಸಲಾಗಿದೆ. ಈ ಒಂದು ತಾತ್ವಿಕತೆಯೇ ಲಂಕೇಶರ ಬಹುಪಾಲು ನಾಟಕಗಳ ಸ್ತ್ರೀ– ಪುರುಷ ಸಂಬಂಧದ ಶೋಧನೆಗಳಲ್ಲಿ ಮುಂದುವರೆದಿವೆ.

'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕವು ಜಗನ್ನಾಥನ ಕೇಂದ್ರ ಪಾತ್ರದ ಮೂಲಕ ವ್ಯವಸ್ಥೆಯ ಪರಿಶೀಲನೆಗೆ ತೊಡಗುತ್ತದೆ. ಜಗನ್ನಾಥ ತನ್ನ ತಂಗಿಯನ್ನು ತಂದೆಯ ವಿರುದ್ಧ ಎತ್ತಿ ಕಟ್ಟಲು ಅವಣಿಸುತ್ತಿದ್ದಾನೆ; ತಂದೆಗೆ ಅವಮಾನ ಮಾಡುವಂತಹ ತರುಣನನ್ನು ಅವಳಿಗೆ ಮದುವೆ ಮಾಡಲು ಹಂಚಿಕೆ ಹಾಕುತ್ತಾನೆ. ತಾಯಿಯ ಬಗೆಗೂ ಹಗುರವಾಗಿ ಮಾತನಾಡುತ್ತಾನೆ. ತಮ್ಮ ಮನೆಯ ವಹಿವಾಟು ನೋಡಿಕೊಳ್ಳುವ ಸ್ಥಳೀಯ ಪುಢಾರಿ ರಾಮಣ್ಣನನ್ನು ತಿರಸ್ಕಾರದಿಂದ ಗೇಲಿ ಮಾಡುತ್ತಿರುತ್ತಾನೆ. ನಾಟಕದ ಆರಂಭದಲ್ಲಿ ಬಹುದೊಡ್ಡ ಕ್ರಾಂತಿಕಾರಿಯಂತೆ ಕಾಣಿಸಿಕೊಳ್ಳುವ ಜಗನ್ನಾಥನ ಸಿನಿಕತನ, ಉಡಾಫೆ, ಹೊಣೆಗೇಡಿತನ ನಿಧಾನಕ್ಕೆ ಅನಾವರಣಗೊಳ್ಳುತ್ತಾ ಹೋಗುವುದೇ ಇಲ್ಲಿನ ತಂತ್ರ. ಅವನ ತಂಗಿ ಕಮಲಾ ಸಹ ಅವನೊಂದಿಗೆ ಸೇರಿಕೊಂಡು ತಂದೆ–ತಾಯಿಗಳನ್ನು ಹೀಗಳೆದು ಮಾತನಾಡುತ್ತಿದ್ದವಳು, ತಾಯಿಯ ಆರೋಗ್ಯ ಹದಗೆಡುತ್ತಿದ್ದಂತೆ, ಅಣ್ಣನಿಗೆ ತಿರುಗಿ ಬೀಳುತ್ತಾಳೆ. ತನ್ನ ಅಣ್ಣನ ಸಿನಿಕತನ, ಢೋಂಗಿ ಕ್ರಾಂತಿಕಾರಿ ಗುಣನನ್ನು ಹೀಯಾಳಿಸುತ್ತಾಳೆ. ಸ್ವಂತ ಅಮ್ಮನ ಬಗೆಗೆ ಅವನ ಸಂದೇಹವನ್ನು ತಿರಸ್ಕಾರದಿಂದ ಖಂಡಿಸುತ್ತಾಳೆ.

'ಇವತ್ತಿನವರೆಗೆ ನಾನು ನಿನ್ನ ಮುದ್ದಿನ ಗಿಳಿ ಆಗಿದ್ದೆ, ನಿನ್ನ ಆಟದ ಜೋಕರ್ ಇನ್ನು ಶುರುವಾಗುತ್ತೆ ಹೊಸ ಅಧ್ಯಾಯ. ನನ್ನಮ್ಮ ಇಲ್ಲಿವರೆಗೆ ಪಟ್ಟ ಪಾಡು ಸಾಕು. ಮಾತಾಡೋಕೊಬ್ಬ ಗಂಡಸಿಲ್ದೆ, ದುಃಖ ಹೇಳಿಕೊಳ್ಳೋಕೊಂದು ಜೀವ ಇಲ್ದೆ, ರಾಮಣ್ಣನಹತ್ರ ಮಾತಾಡಿದ್ರೆ ಕೇಳೋಕೆ ನಾನು ಯಾರು? ನೀನು ಯಾರು? ಹೆಂಗಸಿನ ಕಷ್ಟ ಹೆಂಗಸಿಗೇ ಗೊತ್ತು. ಗಂಡಸು ಆಕೆಗೆ ಗೆಳೆಯನಾಗಿ ಬೇಕಾಗಬಹುದು, ಗಂಡನಾಗಿ ಬೇಕಾಗಬಹುದು, ಬರೀ ಹರಟೆಗೆ ಬೇಕಾಗಬಹುದು. ರಕ್ಷಣೆಗೆ ಬೇಕಾಗಬಹುದು– ಅದನ್ನ ಕೇಳೋಕೆ ನೀನ್ಯಾವ ಮಹಾಪುರುಷ? ನೀನು ಕಟ್ಟಿದ ಸಂದೇಹದ ಚಟ್ಟದಲ್ಲಿ ಬೆಂದೂ ಬೆಂದೂ ಬೂದಿಯಾಗಿದೇವೆ ಗೋತ್ತಾಯ್ತೇ? ಸಾವು ನಮ್ಮ ಕನಸು ಮನಸ್ಸಿನಲ್ಲಿ, ಮಾತುಮಾತಿನಲ್ಲಿ, ಎಡೆಬಿಡದ ರೀತಿಯಲ್ಲಿ ನಮ್ಮನ್ನು ಹಿಂಬಾಲಿಸ್ತಿದೆ–'

ಕಮಲ ಹೀಗೆ ತಿರುಗಿ ಬೀಳುವುದು ಅವಳ ಅಣ್ಣನಿಗೆ ಮತ್ತು ಅವನ ಗೆಳೆಯನಿಗೆ ಇಬ್ಬರಿಗೂ ಅನಿರೀಕ್ಷಿತ ಆಘಾತ ಮಾತ್ರವಲ್ಲ, ನಾಟಕದ ಕ್ರಿಯೆಗೂ ಒಂದು ತಿರುವು ನೀಡುತ್ತದೆ. ಇದರ ಫಲವಾಗಿ ಹುಳದಂತಿದ್ದ ಪುಢಾರಿ ರಾಮಣ್ಣನಿಗೂ ಧೈರ್ಯ ಬಂದು ಜಗನ್ನಾಥನನ್ನು ನಿಕೃಷ್ಟವಾಗಿ ಬಯ್ದು ಹೆದರಿಸುತ್ತಾನೆ. ತಂದೆಯ ಸಾವಿನ ಸುದ್ದಿ, ಪಿತ್ರಾರ್ಜಿತ ಆಸ್ತಿಯೆಲ್ಲಾ ರಾಮಣ್ಣನಿಗೆ ಮಾರಾಟವಾಗಿರುವುದು, ಈ ವಾಸ್ತವಗಳಿಂದ ತತ್ತರಿಸಿದ್ದರೂ ಭಂಡ ಧೈರ್ಯದಿಂದ ಎಲ್ಲವನ್ನೂ ನಿಭಾಯಿಸುತ್ತಿರುವ ಸೋಗು ಹಾಕಿರುವ ಜಗನ್ನಾಥನ ಐಲುತನದ ಮಾತುಗಳೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ನಂಬಿಕೆ, ಸತ್ಯ, ಮಾನವೀಯತೆ ಇಂತಹ ಮೌಲ್ಯಗಳು ಕಳೆದು ಹೋಗುತ್ತಿರುವ ನಗರ ಜೀವನದ ಸಿನಿಕತೆಯನ್ನು 'ಗಿಳಿಯು ಪಂಜರದೊಳಿಲ್ಲ' ನಾಟಕವು ಶೋಧಿಸುತ್ತದೆ. ಬರುವ ಕೆಲವೇ ಪಾತ್ರಗಳು ಸೂಕ್ಷ್ಮ ಮತ್ತು ಚುರುಕಾದ ಸಂಭಾಷಣೆಯ ಮೂಲಕ

ಅಪನಂಬಿಕೆಯ ಅನುಭವವನ್ನು ಕಟ್ಟಿಕೊಡುತ್ತದೆ. ಗಂಡ, ಹೆಂಡತಿ, ಮಗಳು ಗಾಯತ್ರಿ ಮತ್ತು ವ್ಯಕ್ತಿಯ ಪ್ರಾತಿನಿಧಿಕ ಪಾತ್ರಗಳ ನಾಟಕ ತನ್ನ ಪರಿಣಾಮದಲ್ಲಿ ಇಂತಹ ಹಲವು ಪಾತ್ರಗಳನ್ನು ಪ್ರೇಕ್ಷಕರಲ್ಲಿ ಮೂಡಿಸಬಲ್ಲದು. ವ್ಯಕ್ತಿಯ ಆಗಮನದ ನಂತರ ಮಗಳ ಜೊತೆಗೆ ನಡೆಸುವ ಮಾತುಕತೆ ಸ್ವಾರಸ್ಯಕರವಾಗಿದೆ. ಮೂವತ್ತು ರೂಪಾಯಿಗಿಂತಲೂ ಮೋಸ ಹೋದೆನೆಂಬ ಯೋಚನೆ ಮತ್ತು ಮೋಸ ಹೋದರೆ ಆತ್ಮ ಗೌರವಕ್ಕೆ ಧಕ್ಕೆ ಬರುತ್ತೆ ಎಂಬ ಎಚ್ಚರಿಕೆಯಲ್ಲಿ ವ್ಯಕ್ತಿ ವರ್ತಿಸುತ್ತಾನೆ. ನಾಟಕದ ಮುಕ್ತಾಯದಲ್ಲಿ ಅನುಮಾನವೇ ಗಟ್ಟಿಕೊಂಡು ಗಂಡ ಮನೆಯಲ್ಲಿ ಇದ್ದುಕೊಂಡೇ ಇಲ್ಲವೆನಿಸಿಕೊಳ್ಳುತ್ತಾನೆ. ಮಗಳ ಮೂಲಕ ಅವನ ಗುಟ್ಟು ಬಹಿರಂಗಗೊಂಡು ಕಳವಳಗೊಳ್ಳುತ್ತಾನೆ. ಇಂತಹ ಸ್ಥಿತಿಯಲ್ಲಿ ಅವನನ್ನು ನೋಡಿ ಮಗಳು ಗಾಯಿತ್ರಿ ಕೇಳುವ ಮುಗ್ಧ ಪ್ರಶ್ನೆ ಮಾರ್ಮಿಕವಾಗಿದೆ. "ಅಪ್ಪ, ಸತ್ತವರ ಮುಖ ಹೇಗಿರುತ್ತಪ್ಪ?" Appearance may be deceptive – ಕಾಣುವ ಮನುಷ್ಯ ಮತ್ತು ಕಾಣದ ಅವನ ಒಳ್ಳೆತನ ಕುರಿತ ಚರ್ಚೆ ನಾಟಕದ ಬಹುಮುಖ್ಯ ನೆಲೆಗಳಲ್ಲೊಂದು. ಒಳ್ಳೆಯ ಮನುಷ್ಯನನ್ನು ಗುರಿತಿಸುವುದು ಹೇಗೆ ಎಂಬ ಸವಾಲಿನಲ್ಲಿ ಅಪನಂಬಿಕೆ ಬೆಳೆಯುತ್ತದೆ. ಹಣ ಮತ್ತು ಮನುಷ್ಯನ ಸಂಬಂದದಲ್ಲಿ 'ಒಳ್ಳೆತನ' ಇದರ ಸೂಕ್ಷ್ಮ ಗೆರೆ ನಾಟಕದಲ್ಲಿ ಚಿತ್ರಿತವಾಗಿದೆ.

ಕ್ರಾಂತಿ ಬಂತು ಕ್ರಾಂತಿಯ ಸುಧಾ ಪಾತ್ರ ಕೂಡ ಮುಖವಾಡವಿಲ್ಲದ ಒಂದು ಸಹಜ ಪಾತ್ರವಾಗಿ ಮೂಡಿ ಬಂದಿದೆ. ಆಕೆ ಬದುಕಿನ ಬಗೆಗೆ ಸಮಾಜದ ಬಗೆಗೆ ತನ್ನದೇ ಆದ ದೃಢ ನಿರ್ಧಾರಗಳನ್ನು ಹೊಂದಿದ್ದಾಳೆ. ಅವಳ ಪತಿ ಭಗವಾನ್ ಸಮಾಜದಲ್ಲಿ ಜನಪ್ರಿಯತೆಗಾಗಿ ಸೋಗು ಹಾಕಿದ ಜೀವನದಲ್ಲಿ ಬಂಧಿಯಾಗಿದ್ದಾನೆ ಎಂಬುದನ್ನು ನಾಟಕ ಚಿತ್ರಿಸುತ್ತದೆ.

ಹೀಗೆ ಸಮಾಕಾಲೀನ ಸಂದರ್ಭವನ್ನು ಲಂಕೇಶರ ನಾಟಕಗಳು ಪರಿಶೀಲಿಸುತ್ತವೆ. ಈ ಪರಿಶೀಲನೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಡೊಂಗಿತನವನ್ನು ಬಯಲು ಮಾಡುತ್ತವೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ ಪಾಟೀಲ. (2017). *ಚಂಪಾ ನಾಟಕಗಳು.* ಸಪ್ನ ಬುಕ್ ಹೌಸ್
- ಲಂಕೇಶ್, ಪಿ. (2018). *ಲಂಕೇಶರ ನಾಟಕಗಳು.* ಲಂಕೇಶ್ ಪ್ರಕಾಶನ
- ಮರಳಸಿದ್ದಪ್ಪ, ಕೆ. (2019). *ಲಂಕೇಶ್ ಬದುಕು ಬರೆಹ.* ಸಪ್ನ ಬುಕ್ ಹೌಸ್
- ಪ್ರಸಾದಸ್ವಾಮಿ ಎಸ್– ಕನ್ನಡ ನವಿಲು